

بسم اللہ الرّحمٰن الرّحیم

# ಹಾಲೆಂಡ್ ಮತ್ತು ಜರ್ಮನ್ ಸಂದರ್ಶನ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 23-10-2015 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ನನ್ನ ಪ್ರತಿಯೊಂದು ಪ್ರಯಾಣದ ಕಾಲದಲ್ಲಿ ಅಲ್ಲಾಹನು ತನ್ನ ಸಹಾಯದ ಮತ್ತು ಶಕ್ತಿ ಸಾಮರ್ಥ್ಯದ ದೃಷ್ಟಾಂತಗಳನ್ನು ತೋರಿಸುತ್ತಾನೆಂಬುದು ಅವನ ಔದಾರ್ಯವಾಗಿದೆ. ಕಳೆದ ಕೆಲವು ದಿನಗಳಲ್ಲಿ ನಾನು ಹಾಲೆಂಡ್ ಮತ್ತು ಜರ್ಮನಿಯಲ್ಲಿ ಪ್ರಯಾಣ ಮಾಡಿದೆ. ನನ್ಸ್‌ಪೀಟ್ ಎಂಬಲ್ಲಿ ನಮ್ಮ ಒಂದು ಪ್ರಚಾರ ಕೇಂದ್ರವಿದೆ. ಅಲ್ಲಿ ಪಾರ್ಲಿಮೆಂಟಿನ ಒಬ್ಬ ಸದಸ್ಯರನ್ನು ಭೇಟಿಯಾದೆ. ಅವರು ಎರಡು ಮೂರು ವರ್ಷಗಳ ಹಿಂದೆ ಜಮಾಅತಿನ ಪರಿಚಯ ಹೊಂದಿದ್ದರು. ಹಾಲೇಂಡ್‌ನ ಒಂದು ಸಭೆಯಲ್ಲಿ ಅವರು ನನ್ನನ್ನು ಭೇಟಿಯಾದರು. ಅವರ ಮೂಲಕ ಹಾಲೇಂಡಿನ ಪಾರ್ಲಿಮೆಂಟ್ ಹೌಸ್‌ನಲ್ಲಿ ಒಂದು ಕಾರ್ಯಕ್ರಮ ಜರಗಿಸುವ ವ್ಯವಸ್ಥೆಯನ್ನು ಅಲ್ಲಾಹನು ಮಾಡಿಕೊಟ್ಟನು. ಹಾಲೇಂಡಿನ ಜಮಾಅತಿನ ಸ್ಥಿತಿಯನ್ನು ಪರಿಗಣಿಸುವುದಾದರೆ ಅಲ್ಲಾಹನ ಅನುಗ್ರಹದಿಂದ ಆ ಕಾರ್ಯಕ್ರಮ ಸಾಕಷ್ಟು ಚೆನ್ನಾಗಿತ್ತು. ಈ ಕಾರ್ಯಕ್ರಮದಲ್ಲಿ 89 ಗಣ್ಯರು ಭಾಗವಹಿಸಿದರು. ಅವರಲ್ಲಿ ಡಚ್ ಪಾರ್ಲಿಮೆಂಟ್ ಸದಸ್ಯರು ಮಾತ್ರವಲ್ಲ, ಸ್ಪೈನ್, ಆಯರ್‌ಲೇಂಡ್, ಸ್ವೀಡನ್, ಕ್ರೋಶಿಯಾ, ಮೋಂಟೆನೀಗ್ರೋ, ಅಲ್‌ಬಾನಿಯಾ, ಫ್ರಾನ್ಸ್, ಸ್ವಿಝರ್‌ಲೇಂಡ್, ಬೆಲ್‌ಜಿಯಂ, ಜರ್ಮನಿ, ಇಂಡಿಯಾ, ಫಿಲಿಪ್ಪೈನ್ಸ್, ಡೆನ್‌ಮಾರ್ಕ್, ಸೈಪ್ರಸ್ ದೇಶಗಳ ಪಾರ್ಲಿಮೆಂಟ್ ಸದಸ್ಯರು, ರಾಯಭಾರಿಗಳು ಮತ್ತು ಇತರ ಸರಕಾರಿ ಅಧಿಕಾರಿಗಳು ಮತ್ತು ಪ್ರತಿನಿಧಿಗಳು ಸೇರಿದ್ದರು. ಹಾಲೇಂಡ್ ದೇಶದ ಜಮಾಅತ್ ಈಗ ಕೈಗೊಂಡ ಕ್ರಮಗಳು, ಅವರು ಪತ್ರಿಕೆಗಳೊಂದಿಗೆ ಸಾಧಿಸಿದ ಸಂಪರ್ಕ, ಇತರ ಸಂಪರ್ಕ ಮಾರ್ಗಗಳೊಂದಿಗೆ ಸ್ಥಾಪಿಸಿದ ಸಂಪರ್ಕ ಮೊದಲಾದುವುಗಳನ್ನು ಇನ್ನಷ್ಟು ವರ್ಧಿಸುವರೆಂದು ನಾನು ಪ್ರತೀಕ್ಷೆ ಮಾಡುತ್ತೇನೆ. ಈಗ ಮಾಡಿರುವ ಕೆಲಸಗಳೇ ಅತ್ಯಂತ ಉನ್ನತಮಟ್ಟ ಎಂದು ಗ್ರಹಿಸಬಾರದು. ಪಾರ್ಲಿಮೆಂಟ್ ಹೌಸ್‌ನಲ್ಲಿ ನಾನು ಹದಿನೆಂಟು ಇಪ್ಪತ್ತು ಮಿನಿಟುಗಳ ಕಾಲ ಇಸ್ಲಾಮೀ ತತ್ವಗಳು ಮತ್ತು ಇಂದಿನ ಪರಿಸ್ಥಿತಿಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಮಾತನಾಡಿದೆ. ಈ ಕಾರ್ಯಕ್ರಮಕ್ಕೆ ಬಂದ ಅತಿಥಿಗಳು ಮತ್ತು ಕಾರ್ಯಕ್ರಮ ಆಲಿಸಿದವರು ಮುಸ್ಲಿಮೇತರರಾಗಿದ್ದರು. ಅವರ ಮೇಲೆ ಇಸ್ಲಾಮ್ ತತ್ವಗಳ ವಿವರಣೆ ಉತ್ತಮ ಪ್ರಭಾವ ಬೀರಿತು.

ಇದು ಅಲ್ಲಾಹನ ಕೆಲಸವಾಗಿದೆ. ಅವನು ಹೃದಯಗಳನ್ನು ಸ್ವಾಧೀನಪಡಿಸಿಕೊಂಡು ಪ್ರಭಾವ ಬೀರುತ್ತಾನೆ. ಮನುಷ್ಯನ ಪ್ರಯತ್ನಗಳು ಏನನ್ನೂ ಮಾಡಲಾರವು. ಈ ಕಾರ್ಯಕ್ರಮ ಜರಗಿದುದು ಅಲ್ಲಾಹನ ವಿಶಿಷ್ಟ ಅನುಗ್ರಹವಾಗಿದೆ. ಹಾಲೇಂಡಿನ ಜಮಾಅತ್ ಈ ಕಾರ್ಯಕ್ರಮದ ಬಗ್ಗೆ ಅದು ಯಾರದಾದರೂ ಪ್ರಯತ್ನದಿಂದ ಜರಗಿತು, ಅಥವಾ ಜಮಾಅತಿನ ಪ್ರಯತ್ನದಿಂದ ಜರಗಿತು, ಅಥವಾ ಒಬ್ಬ ವ್ಯಕ್ತಿಯ ಪ್ರಯತ್ನದಿಂದ ಜರಗಿತು ಎಂದು ಹೇಳುವುದಾದರೆ ಅದು ತಪ್ಪು ಹೇಳಿಕೆಯಾಗಿದೆ. ಇದು ಹೇಗೆ ಸಾಧ್ಯವಾಯಿತೆಂದೇ ನಮಗೆ ಅರ್ಥವಾಗುವುದಿಲ್ಲ ಎಂದು ಹೆಚ್ಚಿನವರು ಹೇಳುವರೆಂದೇ ನಾನು ಭಾವಿಸುತ್ತೇನೆ. ಯಾವ ಪಾರ್ಲಿಮೆಂಟ್ ಸದಸ್ಯರು ಈ ಕಾರ್ಯಕ್ರಮವನ್ನು ವ್ಯವಸ್ಥೆ ಮಾಡಿದರೋ ಅವರೊಂದಿಗೆ ಕೆಲವು ಪಾರ್ಲಿಮೆಂಟ್ ಸದಸ್ಯರು ಕೇಳಿದರು– ನೀವು ಈ ಕಾರ್ಯಕ್ರಮವನ್ನು ಹೇಗೆ ವ್ಯವಸ್ಥೆಗೊಳಿಸಿದಿರಿ? ಎಂದು. ಆದುದರಿಂದ ನಮ್ಮವರ ದೃಷ್ಟಿಯಲ್ಲಿ ಮಾತ್ರವಲ್ಲ ಅನ್ಯರ ದೃಷ್ಟಿಯಲ್ಲೂ ಈ ಕಾರ್ಯಕ್ರಮ ವ್ಯವಸ್ಥೆಗೊಳಿಸುವುದು ಕಷ್ಟಕರವಾಗಿತ್ತು. ಒಂದು ಚಿಕ್ಕ ಜಮಾಅತಿನ ಕಾರ್ಯಕ್ರಮ ಪಾರ್ಲಿಮೆಂಟ್ ಹೌಸ್‌ನಲ್ಲಿ ಜರಗಿಸುವುದು ಕಷ್ಟಕರವೇ ಆಗಿದೆ. ಈ ಕಾರ್ಯಕ್ರಮದ ವ್ಯವಸ್ಥಾಪಕರಾದ ಪಾರ್ಲಿಮೆಂಟ್ ಸದಸ್ಯರು ಹೇಳುತ್ತಾರೆ– ಈ ಕಾರ್ಯಕ್ರಮದಲ್ಲಿ ಗಣ್ಯರ ಹಾಜರಿಯ ದೃಷ್ಟಿಯಲ್ಲಿ ಮತ್ತು ಇಲ್ಲಿ ಪ್ರಸ್ತಾಪಿಸಲಾದ ಪ್ರಬಂಧದ ದೃಷ್ಟಿಯಲ್ಲಿ ಇದು ನನ್ನ ಪ್ರತೀಕ್ಷೆಗಿಂತ ಬಹಳ ಹೆಚ್ಚು ಯಶಸ್ವಿಯಾಗಿದೆ. ಇದರಿಂದ ದೂರಗಾಮಿ ಪರಿಣಾಮಗಳುಂಟಾಗುವುವು ಎಂದು ಸಹ ಅವರು ಹೇಳಿದರು. ಅಹ್ಮದಿಯಾ ಜಮಾಅತಿನ ಇಮಾಮರು ತನ್ನ ಸಂದೇಶವನ್ನು ಅತ್ಯಂತ ಪ್ರಭಾವಶಾಲಿ ರೂಪದಲ್ಲಿ ನೀಡಿದ್ದಾರೆ. ಇಸ್ಲಾಮಿನ ಶಾಂತಿಪ್ರಿಯ ಮುಖವನ್ನು ಸಹ ಹಾಲೇಂಡಿನ ಜನರು ಕಾಣಬೇಕಾದುದು ಆವಶ್ಯಕವಾಗಿದೆ. ಅವರಿಗೆ ಈ ಸಂದೇಶದ ಆವಶ್ಯಕತೆ ಇದೆ. ಖಲೀಫರು ಪಾರ್ಲಿಮೆಂಟ್ ಹೌಸ್‌ನಲ್ಲಿ ಭಾಗವಹಿಸಿದ ಈ ಕಾರ್ಯಕ್ರಮ ಮೊದಲ ಹೆಜ್ಜೆಯಾಗಿದೆ. ನಾವು ಇನ್ನು ಮುಂದೆ ಇಂತಹ ಹೆಚ್ಚು ಕಾರ್ಯಕ್ರಮಗಳನ್ನು ಜರಗಿಸಬೇಕಾಗಿದೆ ಎಂದು ಸಹ ಅವರು ಹೇಳಿದರು.

ಅನಂತರ ಬೇರೆ ಅನೇಕ ಅತಿಥಿಗಳು ಸಹ ಈ ಕಾರ್ಯಕ್ರಮವನ್ನು ಪ್ರಶಂಸಿಸುತ್ತಾ ಇಸ್ಲಾಮಿನ ವಾಸ್ತವಿಕ ಮುಖವನ್ನು ತೋರಿಸಿದ ಬಗ್ಗೆ ಕೃತಜ್ಞತೆ ಸೂಚಿಸಿದ್ದಾರೆ. ಹಾಲೇಂಡಿನ ಮಾಜಿ ರಕ್ಷಣಾ ಮಂತ್ರಿ ಸಹ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅವರು ಕಾರ್ಯಕ್ರಮ ಮುಗಿದ ನಂತರವೂ ಬಹಳ ಹೊತ್ತು ನನ್ನ ಬಳಿ ಕುಳಿತಿದ್ದರು ಮತ್ತು ಮಾತನಾಡುತ್ತಿದ್ದರು. ಅವರು ಹೇಳಿದರು: ನಿಮ್ಮ ಸಂದೇಶದ ಮೂಲಕ ಇಸ್ಲಾಮಿನ ವಾಸ್ತವಿಕ ಮುಖವನ್ನು ಕಾಣಲು ಸಂದರ್ಭ ಲಭಿಸಿತು. ನೀವು ಪದೇ ಪದೇ ಹಾಲೇಂಡಿಗೆ ಬರಬೇಕೆಂದು ನಾನು ಆಶಿಸುತ್ತೇನೆ. ಆ ಮೂಲಕ ಇಸ್ಲಾಮಿನ ಬಗ್ಗೆ ಜನರಲ್ಲಿರುವ ಭಯ ನಿವಾರಣೆಯಾಗಲಿ. ಪಾರ್ಲಿಮೆಂಟ್ ಸಮಿತಿಯ ಪ್ರಶ್ನೆಗಳಿಗೆ ನೀವು ನೀಡಿದ ಉತ್ತರ ಚಿಂತಾಶೀಲರಾದ ಯಾರಿಗಾದರೂ ಕಣ್ಣು ತೆರೆಯಿಸುವಂತಹದಾಗಿವೆ.

ಈ ಕಾರ್ಯಕ್ರಮಕ್ಕೆ ಆಗಮಿಸಿದ ಸ್ಪೈಯಿನ್ ದೇಶದ ರಾಯಬಾರಿ ಹೇಳಿದರು: ಅಭಿಪ್ರಾಯ ಸ್ವಾತಂತ್ರ್ಯ ಮತ್ತು ಅನ್ಯಧರ್ಮಗಳನ್ನು ಗೌರವಿಸುವ ಬಗ್ಗೆ ಕೇಳಿದ ಪ್ರಶ್ನೆಗಳಿಗೆ ಅಹ್ಮದಿಯಾ ಜಮಾಅತಿನ ಇಮಾಮರು ನೀಡಿದ ಉತ್ತರಗಳು

ಅತ್ಯಂತ ಅನುಯೋಜ್ಯವಾಗಿದ್ದುವು. ಭಾಷಣದಲ್ಲಿ ಧಾರ್ಮಿಕ ಸ್ವಾತಂತ್ರ್ಯ ಮತ್ತು ಭ್ರಾತೃತ್ವದ ಬಗ್ಗೆ ಇಸ್ಲಾಮ್ ಧರ್ಮದ ತತ್ವಗಳ ಪ್ರಕಾರ ನೀಡಿದ ವಿವರಣೆ ಹೃದಯಕ್ಕೆ ತಗಲುವಂತಿದೆ ಮತ್ತು ನಾನು ಅವರನ್ನು ಬೆಂಬಲಿಸುತ್ತೇನೆ. ಏಕೆಂದರೆ ಧರ್ಮ ಗಳ ಮಧ್ಯೆ ಸೌಹಾರ್ದ ಮತ್ತು ಲೋಕದಲ್ಲಿ ಶಾಂತಿ ಸ್ಥಾಪನೆಗೆ ಈ ಮೌಲ್ಯಗಳನ್ನು ನೆನಪಿನಲ್ಲಿಡುವುದು ಅತ್ಯಂತ ಆವಶ್ಯಕವಾ ಗಿದೆ.

ಸ್ಪೈನ್ ದೇಶದ ಪಾರ್ಲಿಮೆಂಟ್ ಸದಸ್ಯರು ಹೇಳಿದರು: ಶಾಂತಿ, ಸ್ವಾತಂತ್ರ್ಯ ಮತ್ತು ಎಲ್ಲ ಸೃಷ್ಟಿಗಳನ್ನು ಸೃಷ್ಟಿಸಿದ ದೇವನೊಂದಿಗೆ ಪ್ರೀತಿಯನ್ನು ಹೊಂದುವ ಆಕರ್ಷಕ ಸಂದೇಶ ಆಲಿಸಿ ನನಗೆ ಬಹಳ ಸಂತೋಷವಾಯಿತು. ಯುದ್ಧಗಳು ಮತ್ತು ಧರ್ಮದ ಹೆಸರಿನಲ್ಲಿ ದೌರ್ಜನ್ಯ ದಿನಂಪ್ರತಿ ವರ್ಧಿ ಸುತ್ತಾ ಇರುವ ಒಂದು ಲೋಕಕ್ಕೆ ಈ ಸಂದೇಶ ನೀಡಲಾಗಿದೆ. ಇಂತಹ ಶಾಂತಿ ಸಂದೇಶದ ಬಗ್ಗೆ ನಾವು ಕೃತಜ್ಞರಾಗಬೇಕು. ಧರ್ಮ ವಿಶ್ವಾಸಿಗಳಾದ ಹಾಗೂ ಶಾಂತಿ ಬಯಸುವ ಎಲ್ಲರೂ ಈಗ ಒಂದಾಗಬೇಕಾಗಿದೆ. ಮತ್ತು ಅವರು ಐಕ್ಯ ಹೊಂದಬೇಕಾ ದುದು ಆವಶ್ಯಕವಾಗಿದೆ. ನಾವು ನಮ್ಮ ಮಧ್ಯೆ ಇರುವ ವ್ಯತ್ಯಾಸಗಳ ಬಗ್ಗೆ ಒತ್ತು ನೀಡುವ ಬದಲು ನಮ್ಮ ಮಧ್ಯೆ ಸಹಮತ ಹೊಂದಿರುವ ವಿಷಯಗಳ ಬಗ್ಗೆ ಗಮನ ಹರಿಸಬೇಕಾದ ಆವಶ್ಯಕತೆಯಿದೆ.

ಮೋಂಟೆ ನೀಗ್ರೋದಿಂದ ಆಗಮಿಸಿದ ಮೂವರಲ್ಲಿ ಒಬ್ಬ ಪಾರ್ಲಿಮೆಂಟ್ ಸದಸ್ಯ ಹೀಗೆಂದರು: ಈ ಕಾರ್ಯಕ್ರಮ ಅಹ್ಮ ದಿಯಾ ಜಮಾಅತ್‌ಗೆ ಬಹಳ ದೊಡ್ಡ ಜಯವಾಗಿದೆ. ಅವರ ಇಮಾಮರು ಇಸ್ಲಾಮ್ ಧರ್ಮದ ನೈಜ ತತ್ವಗಳನ್ನು ಅತ್ಯಂತ ಉತ್ತಮ ರೀತಿಯಲ್ಲಿ ಪ್ರಸ್ತಾಪಿಸಿದರು. ಹಾಲೆಂಡಿನ ಪಾರ್ಲಿ ಮೆಂಟ್ ಸದಸ್ಯರ ಪ್ರಶ್ನೆಗಳು ಅತ್ಯಂತ ತೀಕ್ಷ್ಣವಾಗಿದ್ದುವು. ಅವು ಗಳಿಗೆ ಸಾಕ್ಷ್ಯಾಧಾರಭರಿತವಾಗಿಯೂ ವಸ್ತುನಿಷ್ಠವಾಗಿಯೂ ಇಮಾಮ್ ಜಮಾಅತ್ ಅಹ್ಮದಿಯಾ ಉತ್ತರ ನೀಡಿದರು. ಅಹ್ಮ ದಿಯಾ ಜಮಾಅತಿನ ಇಮಾಮರು ಧೈರ್ಯದಿಂದಲೂ ಆತ್ಮ ವಿಶ್ವಾಸದಿಂದಲೂ ಮಾತನಾಡುತ್ತಾರೆ. ಅಪಾಯಭರಿತವಾಗಿರುವ ಇಂದಿನ ಲೋಕದಲ್ಲಿ ಇಂತಹ ಕಾರ್ಯಕ್ರಮಗಳನ್ನು ಜರ ಗಿಸುವುದು ಅತ್ಯಂತ ಆವಶ್ಯಕವಾಗಿದೆ.

ಹ್ಯೂಮನ್ ರೈಟ್ಸ್ ಡಿಫೆನ್ಸ್ ಸಂಸ್ಥೆಗೆ ಸೇರಿದ ಇಬ್ಬರು ಪ್ರತಿನಿಧಿಗಳು ಅಲ್ಲಿದ್ದರು. ಅವರು ಹೇಳಿದರು: ಪಾರ್ಲಿಮೆಂಟ್ ಹೌಸ್‌ನಲ್ಲಿ ನೀಡಲಾದ ಈ ಸಂದೇಶವನ್ನು ರಾಷ್ಟ್ರಗಳ ನಿಯಮ ನಿರ್ಮಾಪಕರಾದ ಎಲ್ಲರಿಗೂ ತಲಪಿಸಬೇಕಾಗಿದೆ. ಕ್ರೋಶಿಯಾ ದಿಂದ, ಅಲ್ಲಿ ಆಡಳಿತೆ ನಡೆಸುವ ಪಕ್ಷಕ್ಕೆ ಸೇರಿದ ಒಬ್ಬ ಪಾರ್ಲಿ ಮೆಂಟ್ ಸದಸ್ಯರು ಆಗಮಿಸಿದ್ದರು. ಅವರು ಹೇಳಿದರು: ಅಹ್ಮದಿಯಾ ಜಮಾಅತಿನ ಇಮಾಮರು ಇಸ್ಲಾಮೀ ತತ್ವಗಳನ್ನು ಬಹಳ ಸ್ಪಷ್ಟವಾಗಿಯೂ ಪ್ರಭಾವಶಾಲಿಯಾಗಿಯೂ ವಿವರಿಸಿದರು. ಲೋಕದಲ್ಲಿ ಶಾಂತಿ ಸ್ಥಾಪನೆಗೆ ಇಸ್ಲಾಮೀ ತತ್ವೋಪದೇಶಗಳು ಆವಶ್ಯಕವಾಗಿವೆ. ಮುಸ್ಲಿಮರೆಲ್ಲರೂ ಸತ್ಯ ಹೃದಯದೊಂದಿಗೆ ಈ ಉಪದೇಶಗಳನ್ನು ಅನುಸರಿಸುವುದಾದರೆ ಲೋಕವು ಶಾಂತಿ ದಾಯಕವಾಗುವುದು. ಅಭಿಪ್ರಾಯ ಸ್ವಾತಂತ್ರ್ಯದ ಬಗ್ಗೆ ಅಹ್ಮ ದಿಯಾ ಜಮಾಅತಿನ ಇಮಾಮರ ಸ್ಪಷ್ಟವಾದ ನಿಲುವು ಬಹಳ ಪ್ರಭಾವಶಾಲಿಯಾಗಿದೆ. ಹೋಲೋಕಾಸ್ಟ್ (ಯಹೂದಿ ಯರ ಜನಾಂಗ ಹತ್ಯೆ) ಬಗ್ಗೆ ಹೇಳಿಕೆ ನೀಡುವುದರ ಕುರಿತು ಕೆಲವು ದೇಶಗಳಲ್ಲಿರುವ ನಿರ್ಬಂಧಗಳ ಬಗ್ಗೆ ಅವರ ನಿಲುವು ಇನ್ನಷ್ಟು ಶಕ್ತಿ ನೀಡಿತು. ಪಾಕಿಸ್ಥಾನದಲ್ಲಿ ಅಹ್ಮದಿಯರ ವಿರುದ್ಧ ದೌರ್ಜನ್ಯ ನಡೆಯುತ್ತಿದ್ದರೂ ಅಹ್ಮದಿಯಾ ಜಮಾಅತಿನ ಇಮಾಮರು ಪಾಕಿಸ್ಥಾನವನ್ನು ನೇರವಾಗಿ ಖಂಡಿಸಲಿಲ್ಲ. ಉತ್ತಮ ರೀತಿಯಲ್ಲಿ ನೈಜ ಇಸ್ಲಾಮನ್ನು ಅನುಸರಿಸಲು ಅಲ್ಲಿನ ಮುಸ್ಲಿಮರಿಗೆ ಉಪದೇಶಿಸಿದರು. ಅದು ಬಹಳ ಪ್ರಭಾವಶಾಲಿ ರೂಪದಲ್ಲಿತ್ತು. ಆಯುಧಗಳ ಪೂರೈಕೆ ಬಗ್ಗೆ ನಿರ್ಬಂಧ ಹೇರಿಕೆ ಮತ್ತು ಉಗ್ರ ವಾದಿಗಳಿಗೆ ಧನ ಸಹಾಯ ತಡೆಯುವ ಬಗ್ಗೆ ಅವರ ನಿಲುವು ಬಹಳ ವಾಸ್ತವಿಕವಾಗಿತ್ತು. ಲೋಕದ ಶಕ್ತ ರಾಷ್ಟ್ರಗಳು ಈ ಅಂಶಗಳ ಬಗ್ಗೆ ಪ್ರಮಾಣಿಕವಾಗಿ ಯೋಚಿಸಿ ಕಾರ್ಯನಿರತರಾದರೆ ಲೋಕವು ಶಾಂತಿಯ ಕಡೆಗೆ ಮರಳಲು ಸಾಧ್ಯವಿದೆ.

ಸ್ವೀಡನ್ ದೇಶದ ಪಾರ್ಲಿಮೆಂಟ್ ಸದಸ್ಯರು ಹೇಳಿದರು: ಭಾಷಣ ಚೆನ್ನಾಗಿತ್ತು. ಪ್ರಭಾವಶಾಲಿಯಾಗಿತ್ತು. ಧಾರ್ಮಿಕ ನಾಯಕರಾಗಿರುವ ಅವರು ಲೋಕದ ರಾಷ್ಟ್ರೀಯ ನಾಯಕರನ್ನು ಎಚ್ಚರಗೊಳಿಸಿದ್ದಾರೆ. ಅವರ ಭಾಷಣ ಸತ್ಯ ಸಂಧವಾಗಿತ್ತು ಮತ್ತು ಅದರಲ್ಲಿ ಗೂಢಾರ್ಥಗಳೇನೂ ಇರಲಿಲ್ಲ. ಶಾಂತಿ, ನ್ಯಾಯ, ಸಹನೆ, ಮಾನವೀಯತೆ, ಪ್ರೀತಿ ಮತ್ತು ಸಹೋದರತೆ ಬಗ್ಗೆ ಅಹ್ಮದಿಯಾ ಜಮಾಅತಿನ ಇಮಾಮರು ಸರಳ ಶಬ್ದ ಗಳಲ್ಲಿ ಗಮನ ಹರಿಸಿದರು. ಅವರು ಲೋಕಕ್ಕೆ ಒಂದು ಸಂದೇಶವನ್ನು ನೀಡಿದ್ದಾರೆ.

ಆಮ್‌ಸ್ಟರ್‌ಡಮ್ ಯುನಿವರ್ಸಿಟಿಯ ಬೌದ್ಧ ಧರ್ಮ, ಇಸ್ಲಾಮ್ ಮತ್ತು ಇತರ ಧರ್ಮಗಳ ವಿದ್ವಾಂಸರಾದ ಓರ್ವ ಪ್ರೊಫೆಸರ್ ಹೀಗೆ ಹೇಳಿದರು: ಇಸ್ಲಾಮ್ ಧರ್ಮ ಶಾಂತಿಯ ಬಗ್ಗೆ ನೀಡಿದ ಉಪದೇಶಗಳನ್ನು ಅಹ್ಮದಿಯಾ ಜಮಾಅತಿನ ಇಮಾಮರು ಎಷ್ಟು ಸ್ಪಷ್ಟವಾಗಿ ವಿವರಿಸಿದರೆಂದರೆ, ಇಂಟರ್ ಫೈಥ್ ಡಯಲೋಗ್ (ವಿವಿಧ ಧರ್ಮಗಳ ಬಗ್ಗೆ ಚರ್ಚೆ) ಕಾರ್ಯಕ್ರಮಗಳಲ್ಲಿ ಅಹ್ಮದಿಯಾ ಜಮಾಅತಿನ ಪ್ರತಿನಿಧಿತ್ವ ಅನಿ ವಾರ್ಯವಾಗಿದೆ ಎಂದು ನಾನು ಭಾವಿಸುತ್ತೇನೆ. ಅಹ್ಮದಿಯಾ ಜಮಾಅತ್ ನಮ್ಮ ಕಾರ್ಯಕ್ರಮಗಳಲ್ಲಿ ಆವಶ್ಯಕವಾಗಿಯೂ ಭಾಗವಹಿಸಬೇಕು. ಆ ಮೂಲಕ ಇಸ್ಲಾಮಿನ ನೈಜ ಚಿತ್ರ ನಮ್ಮ ಮುಂದೆ ಬರುವಂತಾಗಬೇಕು ಎಂದು ಹೇಳಿದರು.

ನಾಲ್ಕೈದು ದಿನಗಳ ಕಾಲ ಹಾಲೆಂಡಿನಲ್ಲಿದ್ದಾಗ ಪ್ರತಿದಿನ ಯಾವುದಾದರೊಂದು ಪತ್ರಿಕೆ, ರೇಡಿಯೋ, ಟೆಲಿವಿಶನ್‌ಗಳ ಪ್ರತಿನಿಧಿಗಳು ಆಗಮಿಸಿ ನನ್ನ ಸಂದರ್ಶನ ಪಡೆಯುತ್ತಿದ್ದರು. ಅವರೊಂದಿಗೆ ಅರ್ಧ ಗಂಟೆ, ಮೂವತ್ತೈದು ಅಥವಾ ನಲ್ವತ್ತು ನಿಮಿಷಗಳ ತನಕ ಸಹ ಒಂದೊಂದು ಸಂದರ್ಶನ ನಡೆಯು ತ್ತಿತ್ತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸ್ಥಾನ, ಅವರ ವಾದಗಳು, ಇಸ್ಲಾಮ್ ತತ್ವಗಳು, ಲೋಕಶಾಂತಿ, ಖಿಲಾಫತ್ ಮೊದಲಾದ ವಿಷಯಗಳ ಬಗ್ಗೆ ಸಂದರ್ಶನಗಳಲ್ಲಿ ವಿವರಿಸಲಾಗುತ್ತಿತ್ತು. ಒಟ್ಟಾರೆ ನೋಡುವುದಾದರೆ ಹಾಲೇಂ ಡಿನಲ್ಲಿ ಈ ಸಾರಿ ಪ್ರಥಮ ಪ್ರಯತ್ನದಲ್ಲಿ ಎಂಟು ಮಿಲಿಯನ್ ಜನರಿಗೆ ನಮ್ಮ ಸಂದೇಶ ತಲಪಿದೆ.

ಹಾಲೆಂಡಿನಲ್ಲಿ ನಮ್ಮ ಜಮಾಅತಿನ ದ್ವಿತೀಯ ಮಸ್‌ಜಿ ದ್‌ಗೆ ಅಸ್ತಿಭಾರ ಹಾಕುವ ಭಾಗ್ಯ ಲಭಿಸಿತು. ಈ ಮಸ್‌ಜಿದ್ ಬೇಗನೆ ನಿರ್ಮಾಣವಾಗುವಂತೆ ಅಲ್ಲಾಹನು ಅನುಗ್ರಹಿಸಲಿ. ಅರುವತ್ತು ವರ್ಷಗಳ ನಂತರ ಇಲ್ಲಿನ ಜಮಾಅತ್ ಪೂರ್ಣ ರೂಪದ ಮಸ್‌ಜಿದ್ ನಿರ್ಮಿಸುತ್ತಿದೆ. ಇಲ್ಲಿ ಒಂದೆರಡು

ತಬ್ಲೀಗ್ ಕೇಂದ್ರಗಳಿದ್ದುವು. ಆದರೆ ಸರಿಯಾದ ಮಸ್‌ಜಿದ್ ಇರಲಿಲ್ಲ. ಮಸ್‌ಜಿದ್ ನಿರ್ಮಿಸುವುದು ಈ ಕಾಲಘಟ್ಟದ ಆವಶ್ಯಕತೆಯಾಗಿದೆ. ಮಸ್‌ಜಿದ್‌ಗೆ ಅಸ್ತಿಭಾರ ಹಾಕುವಾಗ ಆಗಮಿಸಿದ ಅತಿಥಿಗಳ ಸಂಖ್ಯೆ 102 ಆಗಿತ್ತು. ಅಲ್‌ಮೇರಾ ಎಂಬ ನಗರದಲ್ಲಿ ಈ ಮಸ್‌ಜಿದ್ ನಿರ್ಮಿತವಾಗಲಿದೆ. ಅಲ್ಲಿನ ಮೇಯರ್, ನ್ಯಾಯಧೀಶರು, ನ್ಯಾಯವಾದಿಗಳು, ಡಾಕ್ಟರ್‌ಗಳು, ಆರ್ಕಿಟೆಕ್ಟ್‌ಗಳು, ಧಾರ್ಮಿಕ ನಾಯಕರು, ಹೀಗೆ ವಿವಿಧ ವರ್ಗಗಳ ಜನರು ಅತಿಥಿಗಳಾಗಿ ಆಗಮಿಸಿದ್ದರು. ಅವರಲ್ಲದೆ ಅಲ್‌ಬಾನಿಯಾ, ಮೋಂಟೆನೀಗ್ರೋ, ಕ್ರೋಶಿಯಾ, ಸ್ವೀಡನ್, ಸ್ಪೈನ್, ಸ್ವಿಝರ್‌ಲೇಂಡ್ ದೇಶಗಳಿಂದ ಅತಿಥಿಗಳು ಒಂದು ದಿವಸ ಮೊದಲೇ ಆಗಮಿಸಿದ್ದರು. ಅವರು ಸಹ ಭಾಗವಹಿಸಿದರು.

ಅಲ್‌ಮೇರಾದ ಮೇಯರ್ ಹೇಳಿದರು: ನಿಮ್ಮ ಮಾತುಗಳನ್ನು ಆಲಿಸಿ ಹೃದಯದ ಮೇಲೆ ಬಹಳ ಪ್ರಭಾವ ಉಂಟಾಗಿದೆ. ನೀವು ನೀಡಿದ ಸಂದೇಶ ಶಾಂತಿಯ ವಾತಾವರಣ ಸೃಷ್ಟಿಸಲು ಅತ್ಯಂತ ಪರಿಣಾಮಕರವಾಗಿದೆ. ನಾವೆಲ್ಲರೂ ಸೇರಿ ಅದನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸಬೇಕಾಗಿದೆ. ಈ ಮಸ್‌ಜಿದ್ ಮೂಲಕ ಶಾಂತಿಯ ಈ ಸಂದೇಶ ನಿಶ್ಚಯವಾಗಿಯೂ ಹರಡುವುದೆಂದು ನಾವು ಪ್ರತೀಕ್ಷಿಸುತ್ತೇವೆ.

ಅಲ್ಲಿನ ಲೋಕಲ್ ಕೌನ್ಸಿಲಿನ ಒಬ್ಬ ಸದಸ್ಯ ಹೇಳಿದರು: ಅಹ್ಮದಿಯಾ ಜಮಾಅತಿನ ಇಮಾಮರು ನೀಡಿದ ಈ ಸಂದೇಶ ಎಲ್ಲಾ ವಿಧಗಳ ವಿಚಾರಶೀಲರಿಗೂ ದಾರಿದೀಪವಾಗಿದೆ. ಲಿಬರಲ್ ಪಾರ್ಟಿಯ ಓರ್ವ ಲೀಡರ್ ಹೇಳಿದರು– ಭವಿಷ್ಯತ್ ಕಾಲದಲ್ಲಿ ನಿಮ್ಮ ಜಮಾಅತ್ ಮಾತ್ರ ಲೋಕದಲ್ಲಿ ಶಾಂತಿಗೆ ಖಾತರಿ ನೀಡಬಲ್ಲುದು. ಅಲ್ಲಿ ಒಂದು ಮುಸ್ಲಿಮ್ ರೇಡಿಯೋ ಸ್ಟೇಶನ್ ಇದೆ. ಅದು ನೇಶನಲ್ ಮುಸ್ಲಿಮ್ ರೇಡಿಯೋ ಎಂಬ ಹೆಸರಿನಲ್ಲಿದೆ. ಮಸ್‌ಜಿದ್‌ಗೆ ಅಸ್ತಿಭಾರ ಹಾಕಿದ ಸಮಾಚಾರದ ವರದಿ ಮುಸ್ಲಿಮ್ ರೇಡಿಯೋ ನಾಲ್ಕುವರೆ ಮಿನಿಟು ಕಾಲ ಅಲ್‌ಮೇರಾ ಮಸ್‌ಜಿದ್ ನಿರ್ಮಾಣದ ವರದಿ ಎಂದು ಬಿತ್ತರಿಸಿತು. ಅದರಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಗ್ಗೆ ಮತ್ತು ನನ್ನ ಬಗ್ಗೆ ವಾಗ್ದತ್ತ ಮಸೀಹರ ಖಲೀಫ ಅಲ್‌ಮೇರಾ ಮಸ್‌ಜಿದ್‌ಗೆ ಅಸ್ತಿಭಾರ ಹಾಕಲು ಆಗಮಿಸಿದ್ದಾರೆ ಎಂದು ಸಹ ವರದಿ ಮಾಡಿತು. ನನ್ನ ಭಾಷಣದ ಕೆಲವು ಭಾಗಗಳು ಸಹ ಬಿತ್ತರಿಸಲ್ಪಟ್ಟವು.

ಅನಂತರ ಜರ್ಮನಿಯಲ್ಲಿ ಎರಡು ಮಸ್‌ಜಿದ್‌ಗಳಿಗೆ ಅಸ್ತಿಭಾರ ಹಾಕಲಾಯಿತು. ಅಲ್ಲಿಗೆ ಸಹ ನಗರದ ಗಣ್ಯರು ಮತ್ತು ವಿದ್ಯಾಸಂಪನ್ನರು ಆಗಮಿಸಿದ್ದರು. ಅಲ್ಲಿನ ಕಾರ್ಯಕ್ರಮಗಳಿಂದ ಜಮಾಅತಿನ ಬಗ್ಗೆ ಜನರಿಗೆ ಹೆಚ್ಚು ಪರಿಚಯ ಲಭಿಸಿತು. ಹಾಲೇಂಡ್‌ನಿಂದ ಜರ್ಮನಿಗೆ ಹೋಗುವ ಮಾರ್ಗದಲ್ಲಿ ನೋರ್ಡ್‌ಹಾರ್ನ್ ಎಂಬಲ್ಲಿ ಮಸ್‌ಜಿದ್‌ಗೆ ಅಸ್ತಿಭಾರ ಹಾಕಲಾಯಿತು. ಅಲ್ಲಿನ ಒಂದು ಟಿ.ವಿ. ಚ್ಯಾನೆಲ್ ನನ್ನ ಸಂದರ್ಶನ ನಡೆಸಿತು. ಮತ್ತು ಸಮಾಚಾರ ಸಹ ಬಿತ್ತರಿಸಲಾಯಿತು. ಒಬ್ಬ ಮಾಜಿ ಮೇಯರ್ ಅಲ್ಲಿಗೆ ಬಂದಿದ್ದರು. ಅವರು ಕಾರ್ಯಕ್ರಮ ಮುಗಿತಾಯವಾದ ನಂತರ ಹೇಳಿದರು: ನಾನು ನನ್ನ ಸಂಗಡಿಗರೊಂದಿಗೆ ಹೇಳಿದ್ದೇನೆ. ಈ ರವಿವಾರ ಚರ್ಚ್‌ಗೆ ಹೋಗಬೇಕಾಗಿಲ್ಲ. ನಮಗೆ ಆವಶ್ಯಕವಾದುದನ್ನು ಖಲೀಫರು ನಮಗೆ ಉಪದೇಶಿಸಿದ್ದಾರೆ. ಈ ರೀತಿ ಕೆಲವರು ಅಭಿಪ್ರಾಯ ಸೂಚಿಸುತ್ತಾರೆ. ಅಲ್ಲಾಹನು ವಾಸ್ತವಿಕವಾಗಿ ಅವರ ಹೃದಯಗಳನ್ನು ತೆರೆಯಲಿ ಮತ್ತು ಇಸ್ಲಾಮಿನ ನೈಜ ತತ್ವಗಳನ್ನು ಮನವರಿಕೆ ಮಾಡಿಕೊಂಡು ಅಂಗೀಕರಿಸುವವರಾಗಲಿ.

ಒಬ್ಬ ಜರ್ಮನ್ ಮಹಿಳೆ ಹೇಳಿದರು: ಇದು ಬಹಳ ಉತ್ತಮ ಕಾರ್ಯಕ್ರಮವಾಗಿತ್ತು. ನನಗೆ ಇಸ್ಲಾಮ್ ಬಗ್ಗೆ ಹೆಚ್ಚು ತಿಳುವಳಿಕೆ ಇರಲಿಲ್ಲ. ಈ ದಿನ ಖಲೀಫತುಲ್ ಮಸೀಹ್ ವಿವರಿಸಿದಾಗ ನನಗೆ ಅದರ ಬಗ್ಗೆ ಸರಿಯಾದ ಜ್ಞಾನ ಲಭಿಸಿತು. ಒಬ್ಬ ಜರ್ಮನ್ ಹೇಳಿದರು: ನಾನು ಕೆಥೋಲಿಕ್ ಧರ್ಮದವನು. ಈ ದಿನ ನಾನು ಇಸ್ಲಾಮ್ ಎಂಬ ಮತ್ತೊಂದು ಸುಂದರವಾದ ಧರ್ಮದ ಬಗ್ಗೆ ತಿಳಿದೆ. ಖಲೀಫರ ಭಾಷಣ ಆಲಿಸಿದ ನಂತರ ನನಗೆ ಇಸ್ಲಾಮ್ ಬಗ್ಗೆ ಶೋಧನೆ ನಡೆಸುವ ಅಭಿಲಾಷೆ ಉಂಟಾಗಿದೆ. ಖಲೀಫರು ನಮಗೆ ಇಸ್ಲಾಮ್ ಧರ್ಮದ ವಾಸ್ತವಿಕ ರೂಪ ತಿಳಿಸಿದರು. ಇಸ್ಲಾಮಿನ ಅಸ್ತಿಭಾರ ಪ್ರೀತಿ, ಸ್ವಾತಂತ್ರ್ಯ ಮತ್ತು ಶಾಂತಿಯ ಮೇಲೆ ನೆಲೆ ನಿಂತಿದೆ ಎಂದು ನನಗೆ ತಿಳಿದಿದೆ. ಖಲೀಫರು ಹೇಳಿದ ಮಾತು, ಸಹ ಜೀವಿಗಳ ಹಕ್ಕುಗಳ ಬಗ್ಗೆ ಒತ್ತಿ ಹೇಳುತ್ತದೆ ಎಂಬ ಮಾತು ನನಗೆ ಬಹಳ ಉತ್ತ ಮವಾಗಿ ಕಂಡಿತು.

ಮತ್ತೊಬ್ಬ ಜರ್ಮನ್ ಮಹಿಳೆ ಹೇಳಿದರು: ನಾನು ಧರ್ಮವನ್ನು ಅವಲಂಬಿಸುವವಳಲ್ಲ. ಯಾವುದೇ ಧರ್ಮವನ್ನು ನಾನು ನಂಬುವುದಿಲ್ಲ. ಲೋಕದಲ್ಲಿ ಒಬ್ಬ ಖಲೀಫರಿರುವುದು ಸಹ ನನಗೆ ತಿಳಿದಿರಲಿಲ್ಲ. ಆದರೆ ಈ ದಿನ ನಾನು ಈ ಖಲೀಫರನ್ನು ಕಂಡು ಅವರ ಮಾತುಗಳನ್ನು ಆಲಿಸಿದ ನಂತರ ಇಸ್ಲಾಮ್ ಬಗ್ಗೆ ಅತ್ಯುತ್ತಮ ಅಭಿಪ್ರಾಯ ಹೊಂದಿ ಹಿಂದಿರುಗುತ್ತಿದ್ದೇನೆ. ಮಸ್‌ಜಿದ್ ಕೇವಲ ಆರಾಧನೆಗೆ ಮಾತ್ರವಲ್ಲ ಜನರ ಸೇವೆಗೋಸ್ಕರವೂ ಆಗಿದೆ ಎಂದು ನನಗೆ ತಿಳಿಯಿತು. ಮಸ್‌ಜಿದ್ ನೆರೆ ಹೊರೆಯವರ ಬಗ್ಗೆ ಸಹ ಗಮನ ಹರಿಸುವ ಸ್ಥಳವೆಂದು ಸಹ ನನಗೆ ತಿಳಿಯಿತು. ಮಸ್‌ಜಿದ್ ಶಾಂತಿ ಹರಡುವ ಸ್ಥಳವಾಗಿದೆ ಎಂದು ಸಹ ತಿಳಿಯಿತು. ಇಸ್ಲಾಮ್ ಬಗ್ಗೆ ಇರುವ ಪ್ರಶ್ನೆಗಳು ಮತ್ತು ಭಯ ಅಹ್ಮದಿಯಾ ಜಮಾಅತಿನ ಇಮಾಮರ ಭಾಷಣದಿಂದ ದೂರ ಸರಿದುವು. ಇನ್ನೊಬ್ಬ ಜರ್ಮನ್ ಮಹಿಳೆ ಹೇಳಿದರು: ನಿಮ್ಮ ಜಮಾಅತಿನ ವ್ಯವಸ್ಥೆ ಹೇಗಿದೆ ಎಂದರೆ ಪ್ರತಿಯೊಬ್ಬ ವ್ಯಕ್ತಿ ಶಿಸ್ತು ಬದ್ಧವಾಗಿ ವರ್ತಿಸುತ್ತಾನೆ.

ಜನರು ಹೀಗೆ ಅಭಿಪ್ರಾಯ ಸೂಚಿಸುವುದು ನಮಗೆ ನೆನಪಿಸಿಕೊಡುವುದೇನೆಂದರೆ ನಾವು ಯಾವಾಗಲೂ ಶಿಸ್ತು ಬದ್ಧರಾಗಿರಬೇಕು ಎಂದು. ನಾವು ತಾತ್ಕಾಲಿಕವಾಗಿ ಶಿಸ್ತು ಬದ್ಧರಾಗಿದ್ದರೆ ಸಾಕಾಗಲಾರದು. ನಾವು ಯಾವಾಗಲೂ ಶಿಸ್ತು ಬದ್ಧರಾಗಬೇಕು. ನಾವು ನಮ್ಮ ಮಕ್ಕಳಿಗೆ ಮನೆಗಳಲ್ಲಿ ಚೆನ್ನಾಗಿ ಉಪದೇಶಿಸಬೇಕು. ಇಸ್ಲಾಮೀ ಮೌಲ್ಯಗಳನ್ನು ಕಾಪಾಡುವುದು ಬಹಳ ಆವಶ್ಯಕವಾಗಿದೆ. ಅವುಗಳ ಬಗ್ಗೆ ಯಾವಾಗಲೂ ಗಮನ ಹರಿಸಬೇಕು.

ಅಲ್ಲಿ ಒಂದು ದಂಪತಿ ಒಬ್ಬ ಅಹ್ಮದಿಯೊಂದಿಗೆ ಪರದೆ ಬಗ್ಗೆ ಚರ್ಚಿಸುತ್ತಿದ್ದರು. 'ಇಲ್ಲಿ ಪುರುಷರು ಮಾತ್ರ ಕಾಣಿಸುತ್ತಾರೆ. ಮಹಿಳೆಯರಿಗೆ ಬೇರೆಯೇ ಡೇರೆ ಏಕೆ?' ಎಂದೆಲ್ಲಾ ಕೇಳುತ್ತಿದ್ದರು. ಅವರು ನನ್ನ ಭಾಷಣ ಆಲಿಸಿದರು. ಅವರಿಗೆ ಪರದೆಯ ಬಗ್ಗೆ ವಿವರಿಸಲಾಯಿತು. ಆಗ ಅವರು ಹೇಳಿದರು: ಪಶ್ಚಿಮದ ದೇಶಗಳಲ್ಲಿ ಮಹಿಳೆಯರಿಗಿರುವ ಸ್ವಾತಂತ್ರ್ಯ ಕೇವಲ ತೋರಿಕೆಗೆ

ಇರುವುದಾಗಿದೆ. ವಾಸ್ತವಿಕ ಸ್ವಾತಂತ್ರ್ಯ ಇಲ್ಲ. ನೀವು ಪರದೆಯ ಬಗ್ಗೆ ನೀಡಿದ ವಿವರಣೆ ನನಗೆ ಮನವರಿಕೆ ಆಯಿತು. ಅದರಲ್ಲಿಯೇ ಮಹಿಳೆಗೆ ವೈಭವವಿದೆ ಎಂದು ಹೇಳಿದರು. ಒಟ್ಟಿನಲ್ಲಿ ಅನ್ಯರಿಗೆ ಇಸ್ಲಾಮೀ ತತ್ವಗಳು ಮನವರಿಕೆ ಆಗುತ್ತಿವೆ. ಆದುದರಿಂದ ನಮ್ಮ ಮಹಿಳೆಯರು ಪರದೆಯ ಬಗ್ಗೆ ಕೆಲವು ಸಾರಿ ಹೊಂದುವ ಗೊಂದಲದ ಸ್ಥಿತಿ ನಿವಾರಣೆಯಾಗಬೇಕಾಗಿದೆ. ಅವರು ಅದರ ಬಗ್ಗೆ ದೃಢತೆ ಹೊಂದಬೇಕು. ಅಲ್ಲದೆ ಯಾವುದೇ ರೀತಿಯ ನಟನೆ ಇರಬಾರದು.

ಮತ್ತೊಂದು ವಿಷಯ, ಜರ್ಮನಿಯ ಜಾಮಿಅ ಅಹ್ಮದಿಯಾದ ವಿದ್ಯಾರ್ಥಿಗಳು ಏಳು ವರ್ಷದ ವ್ಯಾಸಂಗ ಪೂರ್ಣ ಮಾಡಿ ಉತ್ತೀರ್ಣರಾಗಿದ್ದಾರೆ. ಈಗ ಹದಿನಾರು ಮುಬಲ್ಲಿಗರು ಸಿದ್ಧರಾಗಿದ್ದಾರೆ. ಅವರ ವಾರ್ಷಿಕ ಕಾನ್ವಕೇಶನ್ ಸಮಾರಂಭ ಸಹ ಜರಗಿತು. ನಾನು ಜರ್ಮನಿಗೆ ಹೋದ ಮುಖ್ಯ ಉದ್ದೇಶ ಇದೇ ಆಗಿತ್ತು. 2008ರಲ್ಲಿ ಇಲ್ಲಿ ಜಾಮಿಅ ಅಹ್ಮದಿಯಾ ಪ್ರಾರಂಭಿಸಲಾಗಿತ್ತು. ಆಗ ಬೈತುಸ್ಸುಬೂಹ್ ಹತ್ತಿರ ಚಿಕ್ಕ ಕಟ್ಟಡದಲ್ಲಿ ಕೆಲವು ಕೋಣೆಗಳಲ್ಲಿ ಪಾಠ ಪ್ರಾರಂಭಿಸಲಾಗಿತ್ತು. ಅಲ್ಲಾಹನ ಅನುಗ್ರಹದಿಂದ ಈಗ ಜಾಮಿಅ ಅಹ್ಮದಿಯಾ ನಡೆಸಲು ಪೂರ್ಣರೂಪದ ಕಟ್ಟಡ ನಿರ್ಮಾಣವಾಗಿದೆ. ಅದರಲ್ಲಿ ವಿದ್ಯಾರ್ಥಿಗಳಿಗೆ ಎಲ್ಲ ಸೌಲಭ್ಯಗಳೂ ಇವೆ.

ಖುತ್‌ಬದ ಕೊನೆಗೆ ಹುಝೂರ್, ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಪುತ್ರ ಮಿರ್ಝಾ ಅಝ್‌ಹರ್ ಅಹ್ಮದ್ ಸಾಹೇಬ್ 14–10–2015ರಂದು ನಿಧನ ಹೊಂದಿದ ಬಗ್ಗೆ ತಿಳಿಸಿ ಅವರ ಜನಾಝ ನಮಾಝ್ ಗಾಯಿಬ್ ಅನುಷ್ಠಿಸುವ ಬಗ್ಗೆ ಪ್ರಕಟಿಸಿದರು. ಮಿರ್ಝಾ ಅಝ್‌ಹರ್ ಅಹ್ಮದ್ ಸಾಹೇಬರ ಸದ್ಗುಣಗಳ ಬಗ್ಗೆ ವಿವರಿಸಿದ ನಂತರ ಹೀಗೆ ಹೇಳಿದರು: "ಹಝ್ರತ್ ಖಲೀಫತುಲ್ ಮಸೀಹ್ ಸಾನೀ ರಝಿಯಲ್ಲಾಹು ಅನ್‌ಹು, ಅವರ ನಿಕಾಹ್ ಖುತ್‌ಬದಲ್ಲಿ ಹೀಗೆ ಹೇಳಿದ್ದರು– 'ಈ ದಿನ ನನ್ನ ಪುತ್ರ ಮಿರ್ಝಾ ಅಝ್‌ಹರ್ ಅಹ್ಮದನ ನಿಕಾಹ್, ಖಾನ್ ಸಯೀದ್ ಅಹ್ಮದ್ ಖಾನರ ಪುತ್ರಿ ಖೈಸರ ಖಾನುಮ್‌ರೊಂದಿಗೆ ಜರಗಲಿದೆ ಎಂದು ಪ್ರಕಟಿಸಲು ನಾನು ನಿಮ್ಮ ಮುಂದೆ ನಿಂತಿದ್ದೇನೆ.' ಹಝ್ರತ್ ಮುಸ್ಲಿಹ್ ಮೌಊದ್ ತನ್ನ ಖುತ್‌ಬದಲ್ಲಿ ಹೀಗೆ ಸಹ ಹೇಳಿದ್ದರು: 'ನಮ್ಮ ಜಮಾಅತ್ ನಮ್ಮ ಚರಿತ್ರೆಯನ್ನು ನೆನಪಿಡುವ ಬಗ್ಗೆ ಬಹಳ ಉದಾಸೀನತೆಯಿಂದ ಇದೆ ಎಂಬುದು ಬಹಳ ಖೇದಕರವಾಗಿದೆ. ನಮ್ಮ ಜಮಾಅತಿನವರು ತೋರಿಸುವ ಉದಾಸೀನತೆ ಪ್ರಾಯಶಃ ಬೇರೆ ಯಾವ ಸಮುದಾಯದವರೂ ತೋರಿಸುವುದಿಲ್ಲ. ಕ್ರೈಸ್ತರನ್ನು ನೋಡಿರಿ, ಅವರು ತಮ್ಮ ಚರಿತ್ರೆಯನ್ನು ನೆನಪಿನಲ್ಲಿಡಲು ಇಷ್ಟು ಉದಾಸೀನತೆ ತೋರಿಸಲಿಲ್ಲ. ಆದಿಕಾಲದ ಮುಸ್ಲಿಮರು ಸಹಾಬರ ಚರಿತ್ರೆಯನ್ನು ಎಷ್ಟು ವಿವರವಾಗಿ ಸಂಗ್ರಹಿಸಿದರೆಂದರೆ ಈ ವಿಷಯಕ್ಕೆ ಸಂಬಂಧಿಸಿದ ಕೆಲವು ಗ್ರಂಥಗಳು ಸಾವಿರಾರು ಪುಟಗಳನ್ನು ಹೊಂದಿವೆ. ಆದರೆ ನಮ್ಮ ಜಮಾಅತ್ ಜ್ಞಾನ ಸಂಪನ್ನವಾದ ಒಂದು ಕಾಲದಲ್ಲಿ ಸ್ಥಾಪಿತವಾಗಿದ್ದು ಕೂಡಾ ನಾವು ನಮ್ಮ ಚರಿತ್ರೆಯನ್ನು ನೆನಪಿನಲ್ಲಿಡುವ ಬಗ್ಗೆ ಬಹಳ ನಿರ್ಲಕ್ಷ್ಯತೆಯಿಂದ ವರ್ತಿಸುತ್ತಿದ್ದೇವೆ."

ಹಝ್ರತ್ ಖಲೀಫತುಲ್ ಮಸೀಹ್ ಹೇಳಿದರು: ಆದುದರಿಂದ ನಾವು ಈ ವಿಷಯದ ಬಗ್ಗೆ ಗಮನ ಹರಿಸಬೇಕಾಗಿದೆ. ಜನರು ಇದರ ಬಗ್ಗೆ ಗಮನ ಹರಿಸಬೇಕು. ನಾನು ಇದರ ಬಗ್ಗೆ ಮೊದಲು ಸಹ ನಿಮ್ಮ ಗಮನ ಸೆಳೆದಿದ್ದೆ. ನೀವು ನಿಮ್ಮ ಚರಿತ್ರೆಯನ್ನು ನಿಮ್ಮ ಕುಟುಂಬದ ಚರಿತ್ರೆಯನ್ನು ನೆನಪಿಸಲು ಪ್ರಯತ್ನಿಸಿರಿ. ಸಹಾಬರ ಬಗ್ಗೆ ಸಹ ಬರೆದಿಡಬೇಕಾದ ಆವಶ್ಯಕತೆಯಿದೆ. ಮಿರ್ಝಾ ಅಝ್‌ಹರ್ ಅಹ್ಮದ್ ಸಾಹೇಬರ ಪತ್ನಿ ಕೆಲವು ವರ್ಷಗಳ ಹಿಂದೆ ನಿಧನ ಹೊಂದಿದ್ದರು. ಆಗ ಸಹ ನಾನು ಇದರ ಬಗ್ಗೆ ಹೇಳಿದ್ದೆ. ಅಲ್ಲಾಹನು ಅವರಿಗೆ ರಹಮ್ ಮತ್ತು ಮಗ್‌ಫಿರತ್ ನೀಡಲಿ – ಆಮೀನ್.

———————————*****———————————

***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 23-10-2015.*

**Summarized by** *Majlis Ansarullah Bharat*

***Kannada Translation**:* M. Ubeidullah for Kannada Desk, Qadian

***Reviewed by**:* M.P Ibrahim | ***Typing**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon